(ಜೆ. ಡಿ. (ಯು) ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಡಿ. ಬಿ. ಚಂದ್ರೇಗೌಡ : ಇದಕ್ಕೇ ನಾನು 'ವಿತ್ತಂಡ ವಾದ' ಎಂದು ಹೇಳಿದ್ದು.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ : ನಮಗೆ ಇವತ್ತು ಬಹಳ ಸಂತೋಷವಾಗಿದೆ. ಮಾನ್ಯ ಸದಸ್ಯರುಗಳು ಬೆಲೆಯೇರಿಕೆ ವಿರುದ್ಧ ಸದನದಿಂದ ಹೊರನಡೆದಿದ್ದಾರೆ. ನಾವು ಸರ್ಕಾರ ಹೊರಗೆ ಹೋಗುವುದಕ್ಕೆ ಆಗುವುದಿಲ್ಲ; ನಿಭಾಯಿಸಬೇಕು. ಇಲ್ಲದೇ ಇದ್ದರೆ ಅವರ ಜೊತೆಯಲ್ಲಿ ಹೊರಹೋಗಬೇಕೆಂದು ನನ್ನ ತೀರ್ಮಾನ. ಏಕೆಂದರೆ ಕೇಂದ್ರ ಸರ್ಕಾರದ ವಿರುದ್ಧವಾಗಿ ಅವರು ಹೊರಹೋಗುತ್ತಿದ್ದಾರೆ. ಆದರೆ ನಾವು ಹೊರಗೆ ಹೋಗುವ ಹಾಗಿಲ್ಲ, ನಾವು ಸರ್ಕಾರವನ್ನು ನಡೆಸುತ್ತಿದ್ದೇವೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸಿಂಧ್ಯ ಮತ್ತು ಅವರ ಸ್ನೇಹಿತರು ನಮ್ಮ ಪರವಾಗಿ ವಾದವನ್ನು ಮಾಡಿದ್ದಾರೆ, ನಮ್ಮ ಪರವಾಗಿ ಸದನದಿಂದ ಹೊರಹೋಗಿದ್ದಾರೆ. ರಾಜ್ಯ ಸರ್ಕಾರಕ್ಕೆ ಏನಾದರೂ ಹೊಸ ಸಲಹೆಗಳು ಬಂದರೆ ಖಂಡಿತ ಅವುಗಳನ್ನು ಪರಿಶೀಲನೆ ಮಾಡಿ ಎಲ್ಲರೂ ಕೂತು ಇದನ್ನು ಬಗೆಹರಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ. ಬಿ. ಇನಾಂದಾರ್ : ಕೆಲವು ಕ್ಲಾರಿಫಿಕೇಷನ್ ಕೊಡುವುದಕ್ಕೆ ನಾನು ಬಯಸುತ್ತೇನೆ. ಹೋದಸಲ ಇತರಕ್ಕಿಂಥ ಸಬ್ಸಿಡಿ ಕಾಂಪೋನೆಂಟ್ ಪ್ರತಿ ಕಿಲೋ ಇ. ಬಿ. ಪಿ. ಎಲ್. 9 ರೂಪಾಯಿ 5 ಪೈಸೆಗೆ ಅಲಾಟ್‌ಮೆಂಟ್ ಇತ್ತು. ಅದು 3 ರೂಪಾಯಿ 50 ಪೈಸೆಗೆ ನಾವು ಕೊಡುತ್ತಿದ್ದೇವೆ. ಆಗ ಸಬ್ಸಿಡಿ ಕಾಂಪೋನೆಂಟ್ ರಾಜ್ಯ ಸರ್ಕಾರದ ಮೇಲೆ ಕೇವಲ 5 ರೂಪಾಯಿ 55 ಪೈಸೆ ಪ್ರತಿ ಕಿಲೋಗೆ ಕೊಡುತ್ತಿದ್ದರು. ಈ ಸಲ ಎಕ್ಸ್‌ಟ್ರಾ ಬಿ. ಸಿ. ಎಲ್-ಸೆಂಟ್ರಲ್ ಇಶ್ಯು ಪ್ರೈಸ್ 11 ರೂಪಾಯಿ 80 ಪೈಸೆಗೆ ಏರಿಸಿದ್ದಾರೆ. ಅದನ್ನು 5 ರೂಪಾಯಿ 90 ಪೈಸೆಗೆ ತೆಗೆದಿದ್ದಾರಾ? The subsidy component we have to bear is about Rs. 7.00. Even this subsidy component is more than what was being given in the last year. ಆದ್ದರಿಂದ ಇದರ ಇತಿಮಿತಿಯನ್ನು ನೋಡಿದಾಗ 555 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ನೋಡಿಕೊಂಡು ನಾವು ಕೊಟ್ಟಿದ್ದೇವೆ. ಹೋದವರ್ಷ ಇದು 305 ಕೋಟಿ ಇತ್ತು. ಈ ವರ್ಷ ಅದನ್ನು ಹೆಚ್ಚಿಸಿ 555 ಕೋಟಿ ಸಬ್ಸಿಡಿ ಕೊಟ್ಟಿದ್ದೇವೆ. ಇದಕ್ಕೆ ಜನರು ಮತ್ತು ಎಲ್ಲರೂ ಸಹ ಸಹಕಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಿಮ್ಮದು ಬಡವರ ವಿರೋಧಿ ನೀತಿ. ಇದು ಜನ ವಿರೋಧಿ ನೀತಿ. ಜನವಿರೋಧ ನೀತಿಯನ್ನು ಇವರು ಯಾವ ರೀತಿ ಮಾಡುತ್ತಿದ್ದಾರೆ ಎಂದು ನಾವು ಹೇಳಬೇಕಾಗಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ : ಇವರದ್ದು ದೇಶವಿರೋಧಿ ನೀತಿ. ಬರೇ ಜನವಿರೋಧಿ ಅಲ್ಲ.

(ಅತೀವ ಗೊಂದಲ)

ಶ್ರೀ ಎಸ್. ಸುರೇಶಕುಮಾರ್ : ಅಧ್ಯಕ್ಷರೆ, ಪಾರ್ಲಿಮೆಂಟರಿ ಸಚಿವರು ಹೇಳಿದ್ದನ್ನು ಕಡತದಿಂದ ವಾಪಸ್ಸು ತೆಗೆಸಿ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ : ಯಾವುದು ಜನವಿರೋಧಿ ನೀತಿ? ಕೇಂದ್ರ ಸರ್ಕಾರ ಏಕಪಕ್ಷೀಯವಾಗಿ ತೆಗೆದುಕೊಂಡಿರತಕ್ಕಂಥ ತೀರ್ಮಾನ ಈ ರಾಷ್ಟ್ರದ ಮೇಲೆ ಅತ್ಯಂತ ದೊಡ್ಡ ಆಘಾತವನ್ನುಂಟುಮಾಡಿದೆ. ಆದ್ದರಿಂದ ಅದೇ ಭಾಷೆ ಅವರಿಗೆ ಸರಿಯಾದದ್ದು.

ಶ್ರೀ ಎಸ್. ಸುರೇಶಕುಮಾರ್ : 'ದೇಶ ವಿರೋಧಿ ನೀತಿ' ಎಂದು ಏನು ಹೇಳಿದ್ದಾರೆ, -he should substantiate. ಏನು ವೊಕಾಬುಲರಿ ಇದೆ ಅಂತ ಮಾತನಾಡುವುದಲ್ಲ.....

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ : ಇಲ್ಲಿ ಕೇಳಿ. ಮಾನ್ಯ ಅಧ್ಯಕ್ಷರೇ, ಏಕಾಏಕಿ ಶೇಕಡಾ 35 ರಷ್ಟು ಡೀಸಲ್ ದರವನ್ನು ಏರಿಸಿ ಒಮ್ಮೆಗೆ ಸಾಮಾನ್ಯ ಪ್ರಯಾಣಿಕರ ಜೇಬಿಗೆ ತೊಂದರೆ ಮಾಡಿರತಕ್ಕಂಥಾದ್ದು ಬಡವರ ಪರವಾದದ್ದಾ?

(ಗೊಂದಲ)

ಶ್ರೀ ಎಸ್. ಸುರೇಶಕುಮಾರ್ : ರಾಜ್ಯ ಸರ್ಕಾರದ ಪಾಪದ ಕೂಸನ್ನು ಬೀದಿಯಲ್ಲಿ ಮೆರವಣಿಗೆ ಮಾಡಿ ಸುಟ್ಟಿರತಕ್ಕಂಥಾದ್ದು ಇದೆ.

(ಗೊಂದಲ)

(ಅನೇಕ ಮಂದಿ ಬಿ. ಜೆ. ಪಿ. ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಅಧ್ಯಕ್ಷರು : ಸುರೇಶ್‌ರವರೇ ಹೀಗೆ ಎಲ್ಲರೂ ಒಟ್ಟಿಗೆ ಮಾತನಾಡಿದರೆ ಯಾರದೂ ಬರೆದುಕೊಳ್ಳುವುದಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : 50 ವರ್ಷಗಳಿಂದ ಇಲ್ಲಿಯವರೆಗೆ ಇವರು ಏನು ಮಾಡಿಕೊಂಡು ಬಂದರು ಎನ್ನುವುದು ಎಲ್ಲರಿಗೂ ಗೊತ್ತಿದೆ. ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸಿಕೊಂಡು ಹೋಗುವುದಕ್ಕೆ ಕೇಂದ್ರ ಸರ್ಕಾರ ಕೆಲವೊಂದು ಕಠಿಣ ನಿಲುವನ್ನು ತೆಗೆದುಕೊಂಡಿರಬಹುದು. ಕೇಂದ್ರ ಸರ್ಕಾರ ತೆಗೆದುಕೊಂಡಂಥ ಕ್ರಮ ದೇಶದ ಆರ್ಥಿಕ ಸುಧಾರಣೆಗಾಗಿ. ಆದರೆ ಇವತ್ತು ಕೇಂದ್ರದ ಮೇಲೆ ಗೂಬೆ ಕೂರಿಸಿ, ಜನವಿರೋಧಿ ಕೆಲಸವನ್ನು ಏನು ಮಾಡುವುದಕ್ಕೆ ಹೊರಟಿದ್ದಾರೆ, ಮಾನ್ಯ ಚಂದ್ರೇಗೌಡರು 'ದೇಶ ವಿರೋಧಿ ಕೆಲಸ' ಎಂದರು. ದೇಶ ವಿರೋಧಿ ಕೆಲಸ ಏನು ನಡೆದಿದೆ ಹೇಳಿ? ಅದಕ್ಕಾಗಿ ಇವತ್ತು ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕಾಂಗ್ರೆಸ್ ಆಡಳಿತದಲ್ಲಿ ದೇಶವನ್ನು ದಿವಾಳಿ ಅಂಚಿಗೆ ತಂದಿಟ್ಟಿದ್ದಾರೆ. ಇವರ ಪಾಪದ ಕೂಸನ್ನು ಕೇಂದ್ರ ಸರ್ಕಾರದ ಮೇಲೆ ಹೊರಿಸಿದ್ದಾರೆ. ಸರ್ಕಾರದ ಜನವಿರೋಧಿ ನೀತಿಯನ್ನು, ಬಡವರ ವಿರೋಧಿ ನೀತಿಯನ್ನು, ಕೂಲಿಕಾರರ ವಿರೋಧಿ ನೀತಿಯನ್ನು ಧಿಕ್ಕರಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಬಿ. ಜೆ. ಪಿ. ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಡೀಸೆಲ್ ಬೆಲೆ ಏರಿಸಿದ್ದು ರಾಜ್ಯ ಸರ್ಕಾರವೇ? ಅನಿಲದ ಬೆಲೆ ಏರಿಸಿದವರು ರಾಜ್ಯ ಸರ್ಕಾರದವರೇ? ಸೀಮೆಎಣ್ಣೆ,ಅಕ್ಕಿ ಗೋಧಿ ಬೆಲೆ ಏರಿಸಿದವರು ರಾಜ್ಯ ಸರ್ಕಾರದವರೇ? ಎಲ್ಲಾ ಬೆಲೆಗಳನ್ನು ಏಕಪಕ್ಷೀಯವಾಗಿ, ಎಲ್. ಪಿ. ಜಿ. ಯನ್ನೂ ಸೇರಿಸಿ ಕೇಂದ್ರ ಸರ್ಕಾರ, ರಾಜ್ಯಗಳ ಜೊತೆ ಸಮಾಲೋಚನೆ ಮಾಡದೇ, ರಾಜ್ಯಗಳ ಆರ್ಥಿಕ ಪರಿಸ್ಥಿತಿಯ ಮೇಲೆ ಎಂತಹ ಪರಿಣಾಮ ಬೀರುತ್ತದೆಂಬುದನ್ನು ಸ್ವಲ್ಪವೂ ಗಣನೆಗೆ ತೆಗೆದುಕೊಳ್ಳದೆ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಂಡಿದೆ. ಇದು ರಾಷ್ಟ್ರದ್ರೋಹದ ಕೆಲಸ ಅಲ್ಲವೇ? ಬಡವರ ಪರವಾಗಿ ಮಾತನಾಡತಕ್ಕಂಥವರು, ಬಡವರ ಪರವಾಗಿ ಕೆಲಸ ಮಾಡುತ್ತೇವೆಂದು ಕೂಡತಕ್ಕಂಥವರು, ಇವರ ಆಳ್ವಿಕೆಯಲ್ಲಿ ಇವತ್ತು ಯಾರು ಯಾರು ಸಭಾತ್ಯಾಗಮಾಡಿದ್ದಾರೆ ಬಹುತೇಕ ಮಂದಿ, ಅವರೇ ಸರ್ಕಾರ ಆಳುತ್ತಿದ್ದಾರೆ, ಇಲ್ಲವೇ ಪಾಲುದಾರರಾಗಿದ್ದಾರೆ. ಅಲ್ಲೂ ಪಾಲು ಬೇಕು, ಇಲ್ಲಿ ವ್ಯಾಜ್ಯ ಮಾಡಬೇಕು. ಅದಕ್ಕಾಗಿಯೇ ನಾನು ಹೇಳಿದ್ದು. ಅಕ್ಕನ ಮನೆಗೂ ಹೋಗಬೇಕು, ಅಕ್ಕಿಯೂ ಖರ್ಚಾಗಬಾರದು. ಈ ನೀತಿ ಸರಿಯಲ್ಲ. ಅದರಿಂದ ನಾನು ಹೇಳಿದ ಭಾಷೆ, ಬಹಳ ಆಲೋಚನೆ ಮಾಡಿ ಹೇಳಿದ್ದೇನೆ. ಅದು ಸರಿಯಾಗಿದೆ, ನಾವು ಅದನ್ನು ತೆಗೆಯಬೇಕಾದ ಪ್ರಮೇಯ ಇಲ್ಲ.

ಶ್ರೀ ಡಿ. ಬಿ. ಇನಾಂದಾರ್ : ಅವರೇ ಏರಿಸಿದಂತಹ ಬೆಲೆಗೆ, ಅವರೇ ಪ್ರತಿಭಟನೆ ಮಾಡತಕ್ಕಂಥ ಒಂದು ಸಂದರ್ಭವನ್ನು ನೋಡುತ್ತಿದ್ದೇವೆ.

ಶ್ರೀ ಸಿ. ಎನ್. ನಾಡಗೌಡ : ಅಧ್ಯಕ್ಷರೆ, ಅವರು ಲಂಚಕೋರ ಸರ್ಕಾರ ಎಂಬ ಪದವನ್ನು ಬಳಸಿದ್ದಾರೆ, ದಯವಿಟ್ಟು ಅದನ್ನು ತೆಗೆಸಬೇಕು.

ಅಧ್ಯಕ್ಷರು : ತೆಗೆಸೋಣ. ಈಗ ಶ್ರೀಮಾನ್ ಸಿಂಧ್ಯ ಮತ್ತು ಇತರೆ ಸದಸ್ಯರು ಈ ಪ್ರೈಸ್ ರೈಸ್ ಬಗ್ಗೆ ಏನು ನಿಲುವಳಿ ಸೂಚನೆಯನ್ನು ತಂದಿದ್ದರೋ, ಇದರ ಬಗ್ಗೆ ಪುನಃ ಪರಿಣಾಮಕಾರಿಯಾಗಿ ಚರ್ಚೆ ಮಾಡುವುದಕ್ಕೆ ರಾಜ್ಯಪಾಲರ ಭಾಷಣ ಮತ್ತು ಡಿಮ್ಯಾಂಡ್ಸ್ ಮೇಲೆ ಮಾತನಾಡುವಾಗ ಬೇಕಾದಷ್ಟು ಅವಕಾಶ ಇರುವುದರಿಂದ I withhold my consent for that Adjournment Motion.